## ಅಂಗೀನೇ ಹಾಕಿಲ್ಲ!

ಪಕ್ಕದ ಮನೆಯ ಜಾನಕಿ ಹಾಗೂ ಭವಾನಿ ಒಂದೇ ಶಾಲೆಯಲ್ಲಿ ಎಲ್.ಕೆ.ಜಿ ಓದುತ್ತಿದ್ದರು. ಜಾನಕಿಯ ತಾಯಿ ಎರಡನೇ ಮಗುವಿನ ಹೆರಿಗೆಯ ಬಳಿಕ ಆಸ್ಪತ್ರೆಯಿಂದ ಮನೆಗೆ ಬಂದರು. ಗೆಳತಿಯರಿಬ್ಬರೂ ಮಗುವನ್ನು ನೋಡಿ ಖುಷಿ ಪಟ್ಟರು. ಮಾರನೇ ದಿನ ಶಾಲೆಗೆ ಹೋದಾಗ ಭವಾನಿ ಖುಷಿಯಿಂದ, 'ಜಾನಕಿ ಮನೆಗೆ ಪಾಪು ಬಂದಿದೆ ಮಿಸ್' ಎಂದಳು. 'ಹೌದಾ ಪುಟ್ಟಿ? ತಮ್ಮ‌ನೊ– ತಂಗಿನೊ?' ಕೇಳಿದರು ಮಿಸ್. ತುಸು ಗೊಂದಲಗೊಂಡ ಜಾನಕಿ, 'ಅದಕ್ಕಿನ್ನೂ ಅಂಗಿನೇ ಹಾಕಿಲ್ಲ ಮಿಸ್. ಅಂಗಿ ಹಾಕಿದ ಮೇಲೆ ಹೇಳ್ತೀನಿ' ಅಂದಳು ಮುದ್ದಾಗಿ.

**ಕೆ.ಜಿ. ಭದ್ರಣ್ಣವರ**





## ಉಡುಗೊರೆ

ಸಭೆ, ಸಮಾರಂಭಗಳಲ್ಲಿ ಭಾಗವಹಿಸಿದವರಿಗೆ ಇನ್ನು ಮುಂದೆ ಪುಷ್ಪ, ಹಾರ, ಉಡುಗೊರೆಗಳ ಬದಲಿಗೆ ಕನ್ನಡ ಪುಸ್ತಕಗಳನ್ನು ನೀಡಬೇಕೆಂದು ಸರ್ಕಾರ ಆದೇಶ ಮಾಡಿದ ಅನಂತರ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ನನಗೆ ಆಹ್ವಾನ ಬಂದಿತ್ತು. ಕಾರ್ಯಕ್ರಮಕ್ಕೆ ಹೋಗಿ ಬಂದೆ. ಮೂರು ಪುಸ್ತಗಳನ್ನು ಪ್ಯಾಕ್ ಮಾಡಿ ಕೊಟ್ಟಿದ್ದರು. ಮನೆಗೆ ಬರುತ್ತಿದ್ದಂತೆ ನನ್ನ ಹೆಂಡತಿ ನನ್ನ ಕೈಯೊಳಗಿದ್ದ ಪುಸ್ತಕಗಳ ಪ್ಯಾಕುಗಳನ್ನು ಕಸಿದುಕೊಂಡು ಕವರ್ ಬಿಚ್ಚತೊಡಗಿದಳು. 'ಅವು ಪುಸ್ತಕಗಳು ಕಣೇ, ಗಿಫ್ಟ್ ಅಲ್ಲ' ಎಂದೆ. 'ನನಗೂ ಗೊತ್ತುರಿ, ಇದರಲ್ಲಿ ಹೊಸರುಚಿ ಪುಸ್ತಕವೇನಾದರೂ ಇದೆಯಾ ಅಂತ ಹುಡುಕ್ತಾ ಇದ್ದೀನಿ' ಎಂದಳು.

**ಭೋಜರಾಜ ಸೊಪ್ಪಿಮಠ**